ಕಳಸ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

೩೨೨ (೭೩೨) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಮಾನ್ಯ ಗ್ರಾಮಾಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೆ:—

ಅ) ಕಳಸ ಕುಡಿಯುವ ನೀರಿನ ಯೋಜನೆಯು ಕೆಲಸ ಅಪೂರ್ಣವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಅದನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಹೌದು.

ಆ) ಸದರಿ ಯೋಜನೆಯ ಎಲ್ಲಾ ಸಿವಿಲ್ ಕೆಲಸಗಳು, ಸ್ಟಾಂಡ್ ಫಿಲ್ಟರು ಹೊರತು ಪೂರ್ಣಗೊಂಡಿವೆ. ಸಾರ್ವಜನಿಕ ಆರೋಗ್ಯ ಶಿಲ್ಪಕಾರ್ಯ ಇಲಾಖೆಯು ೫೫ ಅಶ್ವ ಶಕ್ತಿಯ ನೀರೆತ್ತುವ ಯಂತ್ರವನ್ನು ಕೊಳ್ಳಲು ಕ್ರಮ ಕೈಗೊಂಡಿದ್ದು, ಅದನ್ನು ಶೀಘ್ರದಲ್ಲಿಯೇ ಅಳವಡಿಸಿ, ನೀರು ಸರಬರಾಜು ಅಂತ್ಯದೊಳಗೆ ಕಾರ್ಯಾರಂಭ ಮಾಡಲು ಸೂಕ್ತ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದೆ.

ಮೀನುಗಾರಿಕಾ ಇಲಾಖೆಯ ಪ್ರೌಢಶಾಲಾ ಅಧ್ಯಾಪಕರ ಸೇವಾ ಹಿರಿತನದ ಪಟ್ಟಿ

೩೨೩ (೬೫೬) ಡಾ|| ವಿ.ಎಸ್. ಆಚಾರ್ಯ (ಉಡುಪಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕಾ ಇಲಾಖೆಗೆ ಸೇರಿದ ಪ್ರೌಢಶಾಲೆಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತಿರುವವರಿಗೆ ಸೇವಾ ಹಿರಿತನ ಪಟ್ಟಿಯಲ್ಲಿ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಅಂತಹ ಹಿರಿಯ ಅಧ್ಯಾಪಕರಿಗೆ ಬಡ್ತಿಯನ್ನು ನೀಡುವ ವಿಷಯವನ್ನು ಈಗಲಾದರೂ ಪರಿಗಣಿಸಲಾಗುವುದೇ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಯಾವ ಅನ್ಯಾಯವೂ ಆಗಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

Parents Association Rajajinagar

324 (879) SRI. M.S. KRISHNAN (Rajajinagar).—will the Minister for Education be pleased to state that;—

a) The names of the institutions run by parents Association 6th Block, Rajajinagar, Bangalore.

b) Total number of students studying in those institutions (Class-wise strengh may be furnished).

c) The number of SC and ST students (Medium wise details may be furnished).